# A SMALL ESSAY

If you cannot learn music now, then it does not mean that you will not be able to learn music at all, it does not mean that music is bad, it does not mean that you should stop others from learning music. On the contrary, if you learnt music for some time, and later stopped its practice for some reason, then it does not mean that you should not have any regard for music, it does not mean that you should make others also to stop its practice, it does not mean that you should go against the learning of music itself. When you are not able to become an expert in music, you cannot decide upon others on their behalf.

Same principles apply to all the other subtle art forms, such as painting, dancing, literature, and especially to yoga. Yoga is the art and science of self-realization. Gurus, granthas and manthras are required as the tools for the purpose of self-realization. Once you become realized, it does not mean that you should disregard the gurus, granthas and manthras. If you disregard, then it simply means that you are not yet realized.

We use a vehicle as a tool to carry us from source to destination, and we leave the vehicle after the destination is reached. This does not mean that we have disregard for the vehicle. However, if we don't want to use a vehicle, then we can walk on our own, which takes more time and effort. And without guidance, we may go astray as well. The granthas are our vehicles for self-realization, the guru is the driver, and the manthras are his instructions. If we don't have any regard for them, then either we are on our own, or we have lost our path. And disregarding the vehicle simply means that we have not started the journey itself. After all, knowledge cannot be verified as true, when it is only due to individual intelligence; knowledge has to be obtained and verified as true, only through the collective intelligence.

ಅಧ್ಯಯನವಿಲ್ಲದೆ ಕೇವಲ ಅನುಭವದಿಂದ ಅಧ್ಯಾತ್ಮಜ್ಞಾನ ಸಾಧ್ಯವಿಲ್ಲ. ಅನುಭವಗಳೇನಿದ್ದರೂ ಕೇವಲ ಸ್ಮೃತಿಯನ್ನು ತುಂಬಿಸಿ, ಆನಂತರ ಉತ್ತಮವಾಗಿ ತರ್ಕಿಸಲು ಅನುವು ಮಾಡಿ ಕೊಟ್ಟಾವು; ಅನುಭವಿಸುವವನನ್ನು ಅರಿಯಲು ಅನುಭವಗಳ ಮುಖಾಂತರ ಸಾಧ್ಯವೇ? ಅನುಭವಗಳು ಅನ್ನಮಯ ಹಾಗೂ ಪ್ರಾಣಮಯಕೋಶಗಳಲ್ಲಿ ಮಾತ್ರ; ಅನುಭವಗಳ ಅರಿವಾಗುವುದು ಮನೋಮಯ ಹಾಗೂ ವಿಜ್ಞಾನಮಯಕೋಶಗಳ ಮುಖಾಂತರ. ಆನಂದಮಯನ ಅರಿವು ಅನುಭವದಿಂದಲ್ಲ, ಅನುಭಾವದಿಂದ; ತಾನೇ ಆನಂದಸ್ವರೂಪಿಯೆಂಬ ಅರಿವಿನಿಂದ.

ಕಲ್ಲು ನೀರಿನಲ್ಲಿ ಎಷ್ಟೇ ಮುಳುಗಿದ್ದರೂ ಅದಕ್ಕೆ ನೀರಿನ ಅರಿವಾದೀತೇ ಹೊರತು ತನ್ನ ಅರಿವಾಗದು; ಕಲ್ಲನ್ನು ಕೆತ್ತುವ ಶಿಲ್ಪಿಗೆ ಕಲ್ಲಿನ ಅರಿವು, ತನ್ನ ಸಲಕರಣೆಗಳ ಅರಿವು ಹಾಗೂ ತನ್ನ ಕೌಶಲ್ಯದ ಅರಿವು, ಇವೆಲ್ಲವೂ ಇದ್ದರೇನೇ ಶಿಲ್ಪಿಯಿಂದಾಗಿ ಕಲ್ಲು ಉತ್ತಮ ವಿಗ್ರಹವಾದೀತು. ಶಿಲ್ಪಿಯ ಸಹಾಯದಿಂದ ಕಲ್ಲಿಗೆ ತನ್ನೊಳಗಿರುವ ವಿಗ್ರಹದ ಅರಿವಾದೀತು, ತನ್ನಲ್ಲಿ ಹುದುಗಿರುವ ಸೌಂದರ್ಯದ ಅರಿವಾದೀತು, ತನ್ನಲ್ಲಿ ಅಡಕವಾಗಿರುವ ಬ್ರಹ್ಮತ್ವದ ಅರಿವಾದೀತು. ಇಲ್ಲದಿದ್ದರೆ ಕಲ್ಲು ಬರಿಯ ಕಲ್ಲೇ ಸರಿ. ಕಲ್ಲು ಎಷ್ಟು ಪ್ರಯತ್ನ ಪಟ್ಟರೂ ತಾನು ವಿಗ್ರಹವಾಗದು; ನೀರಿನ ಹರಿವಿನ ಸತತ ಸ್ಪರ್ಶದಿಂದ ಕ್ರಮೇಣ ನುಣುಪಾದೀತು, ಅಷ್ಟೇ. ನುಣುಪಾಗುವುದು ಅನುಭವ, ವಿಗ್ರಹವಾಗುವುದು ಅಧ್ಯಯನ.

ಆದ್ದರಿಂದ, ಯೋಗಸಾಧನೆಯಲ್ಲಿ ಮೊದಲು ಅನುಭವ, ಆಮೇಲೆ ಅಧ್ಯಯನ. ಇಲ್ಲಿ ಶಿಷ್ಯನೇ ಕಲ್ಲು, ಗುರುವೇ ಶಿಲ್ಪಿ, ಗ್ರಂಥಗಳೇ ಶಿಲ್ಪಿಯ ಸಲಕರಣೆಗಳು. ಹಾಗೆಂದು ಕೇವಲ ಅಧ್ಯಯನದಿಂದಲೇ ಜ್ಞಾನವಾದೀತೆಂದರೆ, ಅದೂ ಸಲ್ಲದು. ಕೇವಲ ಅನುಭವಗಳಲ್ಲೇ ಮುಳುಗಿದ್ದು ಅಧ್ಯಯನಕ್ಕೆ ತೊಡಗದವನು ಮರಕುಟಿಗನ ಹಕ್ಕಿಯಂತಾದಾನು. ಕೇವಲ ಅಧ್ಯಯನದಲ್ಲೇ ಮುಳುಗಿದ್ದು ಅನುಷ್ಠಾನವನ್ನು ಮಾಡದವನು ಕೂಚುಭಟ್ಟನಂತಾದಾನು. ಆದ್ದರಿಂದ ಸಾಧಕನು ಸಾಧನೆಯಿಂದ ಸಾಧ್ಯನಾಗುವವರೆಗೂ ಸಮರ್ಥ ಗುರುವಿನ ಮಾರ್ಗದರ್ಶನ, ಅವಲೋಕನ ಹಾಗೂ ಪರಿಶೀಲನೆಯ ಅಗತ್ಯವಿದೆ. ಅನುಭವಿಯು ಅನುಭೂತಿಯನ್ನು ಹೊಂದಿ ಅನುಭಾವಿಯಾದರೆ ಯೋಗಿಯಾದಾನು. ಆದ್ದರಿಂದ ಪ್ರಾರಂಭದಲ್ಲಿ ಯೌಗಿಕ ಅನುಭವ, ಆನಂತರ ಯೌಗಿಕ ಅಧ್ಯಯನ, ಕ್ರಮೇಣ ಅನುಷ್ಠಾನ ಹಾಗೂ ಅಧ್ಯಾಪನ – ಇದು ಸಮರ್ಥ ಯೋಗಿಯ ಜೀವನ. ಹೀಗಿಲ್ಲದಿದ್ದರೆ ಜೀವನವು ಅಧ್ವಾನ.